2017 ಕ.ತೀ.ವ 1162

(ಧಾರವಾಡ ಪೀಠ)

ಸನ್ಮಾನ್ಯ ನ್ಯಾಯಮೂರ್ತಿ ಶ್ರೀ ಬಿ. ವೀರಪ್ಪ

ಶ್ರೀ ರವಿಕುಮಾರ್ –ವಿರುದ್ಧ– ಶ್ರೀಮತಿ ಸೌಭಾಗ್ಯಲಕ್ಷ್ಮಿ @ ಲಕ್ಷ್ಮೀ*

ಭಾರತ ಸಂವಿಧಾನದ 226 ಮತ್ತು 227ನೇ ಅನುಚ್ಛೇದಗಳಡಿಯಲ್ಲಿ ರಿಟ್ ಅರ್ಜಿ.

ಹಿಂದೂ ವಿವಾಹ ಅಧಿನಿಯಮ, 1955ರ 24ನೇ ಪ್ರಕರಣ

ಹಿಂದೂ ವಿವಾಹ ಕಾಯ್ದೆ 1955ರ (ಸಂಕ್ಷಿಪ್ತತೆಗಾಗಿ 'ಅಧಿನಿಯಮ') 24ನೇ ಪ್ರಕರಣದ ಮೇರೆಗೆ ಸಲ್ಲಿಸಿದ ಮಧ್ಯಂತರ ಅರ್ಜಿ ಸಂಬಂಧ ಎದುರುದಾರ ಪತ್ನಿಗೆ 2000/– ರೂ.ಗಳ ಮಧ್ಯಂತರ ಜೀವನಾಂಶ ನೀಡಿ ಹುಬ್ಬಳ್ಳಿಯ ಕೌಟುಂಬಿಕ ನ್ಯಾಯಾಲಯದ ಪ್ರಧಾನ ನ್ಯಾಯಾಧೀಶರು ಹೊರಡಿಸಿದ ದಿನಾಂಕ 07.09.2015ರ ಆದೇಶದ ವಿರುದ್ಧ ಪತಿಯು ಪ್ರಸ್ತುತ ರಿಟ್ ಅರ್ಜಿಯನ್ನು ಸಲ್ಲಿಸಿದ್ದಾರೆ.

13(1ಎ) (1ಬಿ) ಪ್ರಕರಣದ ಉಪಬಂಧಗಳ ಮೇರೆಗೆ ಅರ್ಜಿಯನ್ನು ಸಲ್ಲಿಸುವ ಸಂಬಂಧ ಮತ್ತು ಅಧಿನಿಯಮದ 24ನೇ ಪ್ರಕರಣದ ಮೇರೆಗೆ ಸಲ್ಲಿಸಲಾದ ಅರ್ಜಿಯ ವ್ಯಾಜ್ಯ ಕಾರಣವು, ಪತಿ ಮತ್ತು ಪತ್ನಿ ನಡುವೆ ಪ್ರಾರಂಭಿಸಲಾದ ವೈವಾಹಿಕ ವ್ಯವಹರಣೆಯಾಗಿದ್ದಾಗ ಮಾತ್ರ ಉದ್ಭವಿಸುತ್ತದೆ. ಅಧಿನಿಯಮದ 24ನೇ ಪ್ರಕರಣದ ಮೇರೆಗಿನ ಮಧ್ಯಂತರ ಜೀವನಾಂಶವನ್ನು ಕ್ಲೇಮು ಮಾಡುವುದಕ್ಕೆ ಸಂಬಂಧಿಸಿದ ಪ್ರಾಥಮಿಕ ಅಗತ್ಯತೆಯು ವೈವಾಹಿಕ ವ್ಯವಹರಣೆಯ ಇತ್ಯರ್ಥವಾಗಿರುತ್ತದೆ. ವ್ಯವಹರಣೆಯು ಇತ್ಯರ್ಥದಲ್ಲಿರುವ ಅವಧಿಯಲ್ಲಿ ನಿರ್ವಹಿಸಲು ಅವನನ್ನು ಅಥವಾ ಅವಳನ್ನು ಸಶಕ್ತಗೊಳಿಸಲು ಪಕ್ಷಕಾರರಿಗೆ ಜೀವನಾಂಶವನ್ನು ಖಚಿತಪಡಿಸುತ್ತದೆ ಮತ್ತು ನ್ಯಾಯಾಲಯವು ವೈವಾಹಿಕ ವ್ಯವಹರಣೆಗಳನ್ನು ನಡೆಸುವ ಉದ್ದೇಶಕ್ಕಾಗಿ ಯುಕ್ತ ಮೊತ್ತವನ್ನು ನೀಡಬಹುದು. ಅಧಿನಿಯಮದ 24ನೇ ಪ್ರಕರಣದ ಉಪಬಂಧಗಳ ಮೇರೆಗಿನ ನಿರ್ವಹಣೆಯು, ಪಕ್ಷಕಾರನಿಗೆ ಸ್ವತಂತ್ರ ಆದಾಯವಿರುವುದಿಲ್ಲವೆಂದು ಭಾವಿಸಲಾಗಿರುತ್ತದೆ. ಆದುದರಿಂದ, ವ್ಯವಹರಣೆಗಳು ಇತ್ಯರ್ಥದಲ್ಲಿರುವ ಅವಧಿಯಲ್ಲಿ

*ರಿಟ್ ಅರ್ಜಿ ಸಂಖ್ಯೆ: 114192/2015 (ಜಿಎಂ–ಎಫ್‌ಸಿ), ದಿನಾಂಕ: 9ನೇ ಫೆಬ್ರವರಿ, 2016.

ಅವಳೇ ನಿರ್ವಹಿಸಲು ಅರ್ಜಿದಾರರಿಗೆ ಯಾವುದೇ ಆದಾಯವಿಲ್ಲದಿದ್ದಾಗ ಜೀವನಾಂಶವನ್ನು ನೀಡಲಾಗುತ್ತದೆ. ದಂಡ ಪ್ರಕ್ರಿಯಾ ಸಂಹಿತೆಯ 125ನೇ ಪ್ರಕರಣದ ಮೇರೆಗೆ ಉಪಬಂಧಿಸಲಾದ ಪರಿಹಾರವು ಒಟ್ಟಾರೆಯಾಗಿ ಬೇರೆ ಬೇರೆ ಉದ್ದೇಶಕ್ಕೆ ಸಂಬಂಧಪಟ್ಟದ್ದಾಗಿದೆ. ಅಧಿನಿಯಮದ 24ನೇ ಪ್ರಕರಣದ ಮೇರೆಗೆ ಜೀವನಾಂಶವನ್ನು ನೀಡುವುದು ಕೌಟುಂಬಿಕ ನ್ಯಾಯಾಲಯದ ಅಧಿಕಾರ ವ್ಯಾಪ್ತಿಯಿಂದ ಕಸಿದುಕೊಳ್ಳಲಾಗಿದೆ. ದಂಡ ಪ್ರಕ್ರಿಯಾ ಸಂಹಿತೆಯ 125ನೇ ಪ್ರಕರಣದ ಮೇರೆಗಿನ ವ್ಯವಹರಣೆಗಳ ವ್ಯಾಪ್ತಿಯು, ಪೂರ್ತಿಯಾಗಿ ಸಂಕ್ಷಿಪ್ತ ವ್ಯವಹರಣೆಯಾಗಿದೆ. ಆದುದರಿಂದ, ಇದನ್ನು ಸಂಪೂರ್ಣವಾಗಿ ಭಿನ್ನ ವಲಯದಲ್ಲಿ ನಿರ್ವಹಿಸಲಾಗುತ್ತದೆ. ಅಧಿನಿಯಮದ 24ನೇ ಪ್ರಕರಣದ ಮೇರೆಗೆ ಜೀವನಾಂಶವನ್ನು ಮಂಜೂರು ಮಾಡುವ ಉದ್ದೇಶಕ್ಕಾಗಿ ನಿಯಮಿಸಲಾದ ಗರಿಷ್ಠ ಪರಿಮಿತಿಯಿದೆ. ಅನುಕೂಲವಿಲ್ಲದಿರುವ ಸ್ಥಿತಿಯಲ್ಲಿರುವ ಪಕ್ಷಕಾರನು ನಿರ್ವಹಿಸಲು ಮತ್ತು ವ್ಯವಹರಣೆಗಳನ್ನು ನಡೆಸಲು ಪಕ್ಷಕಾರನಿಗೆ ಜೀವನಾಂಶವನ್ನು ಸಂದಾಯ ಮಾಡುವುದಕ್ಕೆ ಸಂಬಂಧಿಸಿದ ಉಪಬಂಧವನ್ನು ಇದು ಕಲ್ಪಿಸಿರುವುದರಿಂದ ವ್ಯವಹರಣೆಗಳು ಇತ್ಯರ್ಥದಲ್ಲಿರುವ ಅವಧಿಯಲ್ಲಿ ವ್ಯಾಜ್ಯಕ್ಕೆ ಇಬ್ಬರು ಪಕ್ಷಕಾರರ ನಡುವಿನ ಸಮತೋಲನವನ್ನು ನಿರ್ವಹಿಸುವುದನ್ನು ಇದು ಕೋರುತ್ತದೆ. ದಂಡ ಪ್ರಕ್ರಿಯಾ ಸಂಹಿತೆಯ 125ನೇ ಪ್ರಕರಣದ ಮೇರೆಗೆ ಜೀವನಾಂಶವನ್ನು ಸಂದಾಯ ಮಾಡಲು, ಹಿಂದೆ ಅಸ್ತಿತ್ವದಲ್ಲಿದ್ದ ಆದೇಶಗಳಿದ್ದರೆ, ಸದರಿ ಆದೇಶವು, ಅಧಿನಿಯಮದ 24ನೇ ಪ್ರಕರಣದ ಮೇರೆಗಿನ ವ್ಯವಹರಣೆಯಲ್ಲಿ ವೈವಾಹಿಕ ನ್ಯಾಯಾಲಯದ ಗಮನವನ್ನು ಸೆಳೆಯುವಂಥದಾಗಿರುತ್ತದೆ. ಆದಾಗ್ಯೂ, ಅಂಥ ಆದೇಶದ ಅಸ್ತಿತ್ವವು ಸದರಿ ಅಧಿನಿಯಮದ 24ನೇ ಪ್ರಕರಣದ ಮೇರೆಗಿನ ಜೀವನಾಂಶವನ್ನು ಮಂಜೂರು ಮಾಡುವಲ್ಲಿ ನ್ಯಾಯಾಲಯದ ಮಾರ್ಗದಲ್ಲಿ ಅನ್ವಯವಾಗುವುದಿಲ್ಲ. ಆದುದರಿಂದ, ಅಧಿನಿಯಮದ 24ನೇ ಪ್ರಕರಣದ ಮೇರೆಗೆ ಅನ್ವಯಿಸುವಲ್ಲಿ ಕೌಟುಂಬಿಕ ನ್ಯಾಯಾಲಯವು ಮಧ್ಯಂತರ ಜೀವನಾಂಶವನ್ನು ತುಂಬಿಕೊಡುವ ಉದ್ದೇಶಕ್ಕಾಗಿ ದಂಡ ಪ್ರಕ್ರಿಯಾ ಸಂಹಿತೆಯ 125ನೇ ಪ್ರಕರಣದ ಮೇರೆಗೆ ದಂಡಾಧಿಕಾರಿಯವರು ಹೊರಡಿಸಿದ ಆದೇಶವನ್ನು ಪರಿಗಣಿಸಲು ಹಕ್ಕುಳ್ಳದ್ದಾಗಿರುವುದು. ಅಧಿನಿಯಮದ 24ನೇ ಪ್ರಕರಣದ ಮೇರೆಗಿನ ಜೀವನಾಂಶವು ಸ್ವರೂಪದಲ್ಲಿ ಮಧ್ಯಂತರದ್ದಾಗಿದ್ದು, ಇದನ್ನು ವೈವಾಹಿಕ ವ್ಯವಹರಣೆಗಳು ವಿಲೇವಾರಿಯಾಗುವವರೆಗೆ ಕಾರ್ಯಾಚರಣೆಯಲ್ಲಿರುತ್ತವೆ. ಆದುದರಿಂದ, ದಂಡ ಪ್ರಕ್ರಿಯಾ ಸಂಹಿತೆಯ 125ನೇ ಪ್ರಕರಣದ ಮೇರೆಗೆ ಪ್ರಾರಂಭಿಸಲಾದ ಜೀವನಾಂಶ

**ವ್ಯವಹರಣೆಗಳನ್ನು, ಹಿಂದೂ ವಿವಾಹ ಅಧಿನಿಯಮದ 24ನೇ ಪ್ರಕರಣದ ಮೇರೆಗೆ ಹಿಂದೆ ಅಸ್ತಿತ್ವದಲ್ಲಿದ್ದ ಆಧಾರದ ಮೇಲೆ ವಜಾಗೊಳಿಸಲು ಸಾಧ್ಯವಾಗುವುದಿಲ್ಲ.**

**ಪ್ರಸ್ತುತ ಪ್ರಕರಣದ ಒಪ್ಪಿತ ಸಂಗತಿಗಳನ್ನು ಮತ್ತು ಮಾನ್ಯ ಸರ್ವೋಚ್ಚ ನ್ಯಾಯಾಲಯವು ಘೋಷಿಸಿದ ಕಾನೂನನ್ನು ದೃಷ್ಟಿಯಲ್ಲಿಟ್ಟುಕೊಂಡು, ಈ ನ್ಯಾಯಾಲಯವು, ಕೌಟುಂಬಿಕ ನ್ಯಾಯಾಲಯ ಮಂಜೂರು ಮಾಡಿದ ಮಧ್ಯಂತರ ಜೀವನಾಂಶವು ನ್ಯಾಯಯುತ ಮತ್ತು ಯುಕ್ತವಾದುದಾಗಿದೆಯೆಂಬ ಅಭಿಪ್ರಾಯವನ್ನು ಪರಿಗಣಿಸಿದೆ. ಅರ್ಜಿದಾರನು, ಭಾರತ ಸಂವಿಧಾನದ 227ನೇ ಅನುಚ್ಛೇಧದ ಮೇರೆಗೆ ಹಸ್ತಕ್ಷೇಪ ಮಾಡಲು ಯಾವುದೇ ಆಧಾರವನ್ನು ರೂಪಿಸಿರುವುದಿಲ್ಲ ಎಂದು ಅಭಿಪ್ರಾಯಪಟ್ಟ ಉಚ್ಚ ನ್ಯಾಯಾಲಯವು ಸದರಿ ರಿಟ್ ಅರ್ಜಿಯನ್ನು ವಜಾಗೊಳಿಸಿದೆ.**

***ಉಲ್ಲೇಖಿಸಲಾದ ಮೊಕದ್ದಮೆ*** ***ಪ್ಯಾರಾದಲ್ಲಿ***

*1. ಎಐಆರ್ 2014 ಎಸ್‌ಸಿ 2875*
*ಭುವನ್ ಮೋಹನ್ ಸಿಂಗ್ -ವಿರುದ್ಧ-*
*ಮೀನಾ ಮತ್ತು ಇತರರು (ಉಲ್ಲೇ) 10*

ಅರ್ಜಿದಾರರ ಪರವಾಗಿ: ಶ್ರೀ ರವಿ .ಎಸ್ ಮತ್ತೂರ್-ವಕೀಲರು.

**ಆಜ್ಞೆ**

**ನ್ಯಾಯಮೂರ್ತಿ ಶ್ರೀ ಬಿ. ವೀರಪ್ಪ :**

ಹಿಂದೂ ವಿವಾಹ ಕಾಯ್ದೆ 1955ರ (ಸಂಕ್ಷಿಪ್ತತೆಗಾಗಿ 'ಅಧಿನಿಯಮ') 24ನೇ ಪ್ರಕರಣದ ಮೇರೆಗೆ ಸಲ್ಲಿಸಿದ ಮಧ್ಯಂತರ ಅರ್ಜಿ ಸಂಬಂಧ ಎದುರುದಾರ ಪತ್ನಿಗೆ 2000/- ರೂ.ಗಳ ಮಧ್ಯಂತರ ಜೀವನಾಂಶ ನೀಡಿ ಹುಬ್ಬಳ್ಳಿಯ ಕೌಟುಂಬಿಕ ನ್ಯಾಯಾಲಯದ ಪ್ರಧಾನ ನ್ಯಾಯಾಧೀಶರು ಹೊರಡಿಸಿದ ದಿನಾಂಕ 07.09.2015ರ ಆದೇಶದ ವಿರುದ್ಧ ಪತಿಯು ಮೇಲಿನ ರಿಟ್ ಅರ್ಜಿಯನ್ನು ಸಲ್ಲಿಸಿದ್ದಾರೆ.

2. ಅರ್ಜಿದಾರ ಮತ್ತು ಎದುರುದಾರರು ಪತಿ ಮತ್ತು ಪತ್ನಿಯರಾಗಿದ್ದು, ಅವರ ವಿವಾಹವು ಹಿಂದೂ ಸಂಪ್ರದಾಯದ ಪ್ರಕಾರ ಕುಂದಗೋಳದಲ್ಲಿ ದಿನಾಂಕ 30.5.2013 ರಂದು ನೆರವೇರಿತ್ತು. ಇದಾದ ನಂತರ, 2015ರ ಏಪ್ರಿಲ್ ತಿಂಗಳ ಅವಧಿಯಲ್ಲಿ, ಎದುರುದಾರರು, ಜೀವನಾಂಶಕ್ಕಾಗಿ ಕುಂದಗೋಳದ ಜೆಎಂಎಫ್‌ಸಿ ಮುಂದೆ ದಂಡ ಪ್ರಕ್ರಿಯಾ ಸಂಹಿತೆಯ 125ನೇ ಪ್ರಕರಣದ ಮೇರೆಗೆ ಕ್ರಿಮಿನಲ್ ಸಂಕೀರ್ಣ ಮೊಕದ್ದಮೆ ಸಂ.39/2015ರಲ್ಲಿ ಅರ್ಜಿ ಸಲ್ಲಿಸಿದ್ದು, ಪ್ರಸ್ತುತ ಅರ್ಜಿದಾರರು, ಅವನ ತಾಯಿಯ ಸೂಚನೆಯಂತೆ ವರದಕ್ಷಿಣೆಗೆ ಒತ್ತಾಯಿಸಿದ್ದು, ಎದುರುದಾರ–ಪತ್ನಿಯನ್ನು ನಿರ್ವಹಿಸಲು ನಿರಾಕರಿಸಿದ್ದಾರೆಂದು ಆಪಾದಿಸಿದ್ದಾರೆ. ಸದರಿ ಮೊಕದ್ದಮೆಯಲ್ಲಿ, ಮಾನ್ಯ ಜೆಎಂಎಫ್‌ಸಿ ಕುಂದಗೋಳ ಇವರು, ಎದುರುದಾರ–ಪತ್ನಿಗೆ ಪ್ರತೀ ತಿಂಗಳು 2,000/– ರೂ.ಗಳ ಜೀವನಾಂಶವನ್ನು ಮಂಜೂರು ಮಾಡಿದ್ದಾರೆ. ಇದಾದ ತರುವಾಯ, ಅರ್ಜಿದಾರರು, ವಿವಾಹ ವಿಘಟನೆಯಾದ ಸಂಬಂಧ ಎದುರುದಾರ–ಪತ್ನಿ ವಿರುದ್ಧ ಹಿಂದೂ ವಿವಾಹ ಕಾಯ್ದೆ, 13(1ಎ) ಮತ್ತು (1ಬಿ) ಪ್ರಕರಣದ ಉಪಬಂಧಗಳ ಮೇರೆಗೆ ಎಂ.ಸಿ. ಸಂ.60/2015ರಲ್ಲಿ ವೈವಾಹಿಕ ಮೊಕದ್ದಮೆಯನ್ನು ಸಲ್ಲಿಸಿದರು. ಸದರಿ ವೈವಾಹಿಕ ಮೊಕದ್ದಮೆಯು ಇತ್ಯರ್ಥದಲ್ಲಿರುವ ಅವಧಿಯಲ್ಲಿ, ಎದುರುದಾರಳು ಪ್ರತೀ ತಿಂಗಳಿಗೆ 8,000/– ರೂ.ಗಳ ಮಧ್ಯಂತರ ಜೀವನಾಂಶವನ್ನು ಮತ್ತು 25,000/– ರೂ.ಗಳ ವ್ಯಾಜ್ಯ ವೆಚ್ಚವನ್ನು ಅರ್ಜಿದಾರ–ಪತಿಯಿಂದ ಕೋರಿದ್ದು, ಅಧಿನಿಯಮದ 24ನೇ ಪ್ರಕರಣದ ಮೇರೆಗೆ ಅರ್ಜಿಯನ್ನು ಸಲ್ಲಿಸಿದ್ದಾರೆ. ಸದರಿ ಅರ್ಜಿಯನ್ನು, ಅರ್ಜಿದಾರರು ಪ್ರತಿರೋಧಿಸಿದ್ದಾರೆ.

3. ಇಬ್ಬರೂ ಪಕ್ಷಕಾರರ ವಾದವನ್ನು ಆಲಿಸಿದ ತರುವಾಯ ಮಾನ್ಯ ಪ್ರಧಾನ ನ್ಯಾಯಾಧೀಶರು, ಕೌಟುಂಬಿಕ ನ್ಯಾಯಾಲಯ ಇವರು, ದಿನಾಂಕ 07.09.2015 ರಂದು ಪ್ರಶ್ನಿತ ಆದೇಶದ ಮೂಲಕ ಅರ್ಜಿಯನ್ನು ಭಾಗಶಃ ಪುರಸ್ಕರಿಸಿ ಎದುರುದಾರ–ಪತ್ನಿಗೆ ಪ್ರತೀ ತಿಂಗಳಿಗೆ 2,000/– ರೂ.ಗಳ ಮಧ್ಯಂತರ ಜೀವನಾಂಶವನ್ನು 5,000/– ರೂ.ಗಳ ವ್ಯಾಜ್ಯ ವೆಚ್ಚವನ್ನು ಮಂಜೂರು ಮಾಡಿರುತ್ತಾರೆ. ಸದರಿ ಆದೇಶದ ವಿರುದ್ಧ ಪ್ರಸ್ತುತ ರಿಟ್ ಅರ್ಜಿಯನ್ನು ಸಲ್ಲಿಸಲಾಗಿದೆ.

4. ನಾನು ಅರ್ಜಿದಾರರ ಪರವಾದ ಮಾನ್ಯ ವಕೀಲರ ವಾದವನ್ನು ಆಲಿಸಿರುತ್ತೇನೆ.

5. ಅರ್ಜಿದಾರರ ಪರ ಹಾಜರಾಗಿರುವ ಮಾನ್ಯ ಶ್ರೀ ರವಿ ಎಸ್ ಮುತ್ತೂರ್‌ರವರು ಭಾವಾವೇಶದಿಂದ ವಾದಿಸಿದ್ದು, ಎದುರುದಾರ–ಪತ್ನಿಗೆ ಪ್ರತಿ ತಿಂಗಳು 2,000/– ರೂ.ಗಳ ಮಧ್ಯಂತರ ಜೀವನಾಂಶ ನೀಡಿ ಕೌಟುಂಬಿಕ ನ್ಯಾಯಾಲಯವು ಹೊರಡಿಸಿದ ಪ್ರಶ್ನಿತ ಆದೇಶವು ಕಾನೂನಿಗೆ ವಿರುದ್ಧವಾಗಿದೆಯೆಂದು ಮತ್ತು ಎದುರುದಾರರು, ಕುಂದಗೋಳದ ಮಾನ್ಯ ಜೆಎಂಎಫ್‌ಸಿಯವರು ಕ್ರಿಮಿನಲ್ ಸಂಕೀರ್ಣ ಸಂ.39/ 2015ರಲ್ಲಿ ಈಗಾಗಲೇ ಜೀವನಾಂಶವನ್ನು ಪಡೆದುಕೊಂಡಿರುವುದನ್ನು ಗಮನಿಸುವಲ್ಲಿ ಕೌಟುಂಬಿಕ ನ್ಯಾಯಾಲಯವು ವಿಫಲವಾಗಿದೆಯೆಂದು ವಾದಿಸಿದ್ದಾರೆ. ಅವರು, ಕೌಟುಂಬಿಕ ನ್ಯಾಯಾಲಯವು, ಯಾವುದೇ ಮಧ್ಯಂತರ ಜೀವನಾಂಶವನ್ನು ನೀಡಬಾರದೆಂದು ವಾದಿಸಿದ್ದಾರೆ. ಆದುದರಿಂದ ರಿಟ್ ಅರ್ಜಿಯನ್ನು ಪುರಸ್ಕರಿಸಬೇಕೆಂದು ಕೋರಿ ಕೊಂಡಿದ್ದಾರೆ.

6. ಅರ್ಜಿದಾರರ ಪರವಾಗಿ ಹಾಜರಾಗಿರುವ ಮಾನ್ಯ ವಕೀಲರು ಮಾಡಿದ ವಾದಗಳಿಗೆ ನನ್ನ ತೀವ್ರಾಪೇಕ್ಷೆಯ ಪರಿಗಣನೆಯನ್ನು ನೀಡಿರುತ್ತೇನೆ ಮತ್ತು ದಾಖಲೆಯಲ್ಲಿರುವ ಸಂಪೂರ್ಣ ಸಾಕ್ಷ್ಯಗಳನ್ನು ಅವಗಾಹಿಸಿದ್ದೇನೆ.

7. ಅರ್ಜಿದಾರ ಮತ್ತು ಎದುರುದಾರರ ನಡುವೆ ದಿನಾಂಕ 30.5.2013 ರಂದು ವಿವಾಹ ನೆರವೇರಿತ್ತು ಎಂಬುದು ನಿರ್ವಿವಾದವಾದ ಸಂಗತಿಯಾಗಿದೆ. ಎದುರುದಾರಳು, ದಂಡ ಪ್ರಕ್ರಿಯಾ ಸಂಹಿತೆಯ 125ನೇ ಪ್ರಕರಣದ ಮೇರೆಗೆ ಕ್ರಿಮಿನಲ್ ಸಂಕೀರ್ಣ ಸಂಖ್ಯೆ. 39/2015ರಲ್ಲಿ ಅರ್ಜಿಯನ್ನು ಸಲ್ಲಿಸಿದ್ದು, ಪ್ರತೀ ತಿಂಗಳು 2,000/– ರೂ.ಗಳ ಜೀವನಾಂಶವನ್ನು ಪಡೆದಿರುವುದೂ ಸಹ ಒಪ್ಪಿತ ಸಂಗತಿಯಾಗಿದೆ. ಎದುರುದಾರ–ಪತ್ನಿಗೆ ಜೀವನಾಂಶವನ್ನು ಮಂಜೂರು ಮಾಡಿ ಜೆ.ಎಂ.ಎಫ್.ಸಿ.ಯು ಹೊರಡಿಸಿದ ಸದರಿ ಆದೇಶವನ್ನು ಪ್ರಸ್ತುತ ಅರ್ಜಿದಾರ–ಪತಿಯು ಎಲ್ಲೂ ಪ್ರಶ್ನಿಸಿಲ್ಲ ಎಂಬುದೂ ಸಹ ನಿರ್ವಿವಾದ ಸಂಗತಿಯಾಗಿದೆ. ಪ್ರಸ್ತುತ ಅರ್ಜಿದಾರ–ಪತಿಯು, ಕ್ರೌರ್ಯದ ಆಧಾರದ ಮೇಲೆ ಮತ್ತು ಪರಿತ್ಯಜನೆಯ ಆಧಾರದ ಮೇಲೆ ವಿವಾಹವನ್ನು ವಿಘಟಿಸಲು ಕೋರಿರುವ ಎದುರುದಾರರ ವಿರುದ್ಧ

ಹಿಂದೂ ವಿವಾಹ ಕಾಯ್ದೆಯ 13(1ಎ)(1ಬಿ) ಪ್ರಕರಣದ ಉಪಬಂಧಗಳ ಮೇರೆಗೆ ವೈವಾಹಿಕ ಮೊಕದ್ದಮೆಯನ್ನು ಹೂಡಿರುವುದು ಒಪ್ಪಿತ ಸಂಗತಿಯಾಗಿದೆ. ಸದರಿ ಅರ್ಜಿಯು ಇತ್ಯರ್ಥದಲ್ಲಿರುವ ಅವಧಿಯಲ್ಲಿ, ಪ್ರಸ್ತುತ ಅರ್ಜಿಯನ್ನು ಜೀವನಾಂಶಕ್ಕಾಗಿ ಸಲ್ಲಿಸಲಾಗಿದೆ. ದಾಖಲೆಯಲ್ಲಿರುವ ಸಾಕ್ಷ್ಯವನ್ನು ಕೌಟುಂಬಿಕ ನ್ಯಾಯಾಲಯವು ಪರಿಗಣಿಸುವಾಗ, ಅರ್ಜಿದಾರನು ತಜ್ಞ ತಾಂತ್ರಿಕನಾಗಿದ್ದು, ಖಾಸಗಿಯಾಗಿ ಕಾರ್ಯನಿರ್ವಹಿಸಿದ್ದು, ಪ್ರತೀ ತಿಂಗಳು 10,000/– ರೂ.ಗಳನ್ನು ಪಡೆಯುತ್ತಿದ್ದಾನೆ ಮತ್ತು ಮನೆಯಿಂದ ಬಾಡಿಗೆಯನ್ನು ಸಹ ಪಡೆದುಕೊಳ್ಳುತ್ತಿದ್ದು ವಿಲಾಸಿ ಜೀವನವನ್ನು ನಡೆಸುತ್ತಿರುವನೆಂಬ ನಿರ್ಣಯವನ್ನು ದಾಖಲಿಸಿದೆ. ಅಷ್ಟೇ ಅಲ್ಲದೆ, ಕೌಟುಂಬಿಕ ನ್ಯಾಯಾಲಯವು ಪ್ರತಿ ತಿಂಗಳು 2,000/– ರೂ.ಗಳ ಜೀವನಾಂಶವನ್ನು ಮಂಜೂರು ಮಾಡಿದ್ದು, ಕ್ರಿಮಿನಲ್ ಸಂ.39/2015ರಲ್ಲಿ ಹೊರಡಿಸಿದ ಆದೇಶಗಳನ್ನು ಹೊರಡಿಸಿದರೂ ಅರ್ಜಿದಾರನು ಯಾವುದೇ ಸಂದಾಯವನ್ನು ಮಾಡಿರುವುದಿಲ್ಲ ಮತ್ತು ಪತ್ನಿಯು ವಸೂಲಿ ವ್ಯವಹರಣೆಗಳನ್ನು ಪ್ರಾರಂಭಿಸಿರುವುದಿಲ್ಲವೆಂದು ದಾಖಲಿಸಿದೆ. ಮಧ್ಯಂತರ ಜೀವನಾಂಶವನ್ನು ಕ್ರಿಮಿನಲ್ ವ್ಯವಹರಣೆಗಳಲ್ಲಿ ಆದೇಶಿಸಲಾಗಿದೆಯೆನ್ನುವ ಕಾರಣ ಮಾತ್ರದಿಂದಲೇ ಅಧಿನಿಯಮದ 24ನೇ ಪ್ರಕರಣದ ಮೇರೆಗೆ ಅರ್ಜಿಯನ್ನು ನಿರ್ವಹಿಸುವುದನ್ನು ನಿಷೇಧಿಸಿರುವುದಿಲ್ಲ. ತದನುಸಾರವಾಗಿ, ಕೌಟುಂಬಿಕ ನ್ಯಾಯಾಲಯವು ಪ್ರತೀ ತಿಂಗಳು 2,000/– ರೂ.ಗಳ ಮಧ್ಯಂತರ ಜೀವನಾಂಶವನ್ನು ಮತ್ತು 5,000/– ರೂ.ಗಳ ವ್ಯಾಜ್ಯ ವೆಚ್ಚವನ್ನು ಮಂಜೂರು ಮಾಡಿ ಅರ್ಜಿಯನ್ನು ಭಾಗಶಃವಾಗಿ ಪುರಸ್ಕರಿಸಿದೆ.

8. 13(1ಎ) (1ಬಿ) ಪ್ರಕರಣದ ಉಪಬಂಧಗಳ ಮೇರೆಗೆ ಅರ್ಜಿಯನ್ನು ಸಲ್ಲಿಸುವ ಸಂಬಂಧ ಮತ್ತು ಅಧಿನಿಯಮದ 24ನೇ ಪ್ರಕರಣದ ಮೇರೆಗೆ ಸಲ್ಲಿಸಲಾದ ಅರ್ಜಿಯ ವ್ಯಾಜ್ಯ ಕಾರಣವು, ಪತಿ ಮತ್ತು ಪತ್ನಿ ನಡುವೆ ಪ್ರಾರಂಭಿಸಲಾದ ವೈವಾಹಿಕ ವ್ಯವಹರಣೆಯಾಗಿದ್ದಾಗ ಮಾತ್ರ ಉದ್ಭವಿಸುತ್ತದೆ. ಅಧಿನಿಯಮದ 24ನೇ ಪ್ರಕರಣದ ಮೇರೆಗಿನ ಮಧ್ಯಂತರ ಜೀವನಾಂಶವನ್ನು ಕ್ಲೇಮು ಮಾಡುವುದಕ್ಕೆ ಸಂಬಂಧಿಸಿದ ಪ್ರಾಥಮಿಕ ಅಗತ್ಯತೆಯು ವೈವಾಹಿಕ ವ್ಯವಹರಣೆಯು ಇತ್ಯರ್ಥವಾಗಿರುತ್ತದೆ. ವ್ಯವಹರಣೆಯು ಇತ್ಯರ್ಥದಲ್ಲಿರುವ ಅವಧಿಯಲ್ಲಿ ನಿರ್ವಹಿಸಲು ಅವನನ್ನು ಅಥವಾ ಅವಳನ್ನು ಸಶಕ್ತಗೊಳಿಸಲು ಪಕ್ಷಕಾರರಿಗೆ ಜೀವನಾಂಶವನ್ನು

ಖಚಿತಪಡಿಸುತ್ತದೆ ಮತ್ತು ನ್ಯಾಯಾಲಯವು ವೈವಾಹಿಕ ವ್ಯವಹರಣೆಗಳನ್ನು ನಡೆಸುವ ಉದ್ದೇಶಕ್ಕಾಗಿ ಯುಕ್ತ ಮೊತ್ತವನ್ನು ನೀಡಬಹುದು. ಅಧಿನಿಯಮದ 24ನೇ ಪ್ರಕರಣದ ಉಪಬಂಧಗಳ ಮೇರೆಗಿನ ನಿರ್ವಹಣೆಯು, ಪಕ್ಷಕಾರನಿಗೆ ಸ್ವತಂತ್ರ ಆದಾಯವಿರುವುದಿಲ್ಲವೆಂದು ಭಾವಿಸಲಾಗಿರುತ್ತದೆ. ಆದುದರಿಂದ, ವ್ಯವಹರಣೆಗಳು ಇತ್ಯರ್ಥದಲ್ಲಿರುವ ಅವಧಿಯಲ್ಲಿ ಅವಳೇ ನಿರ್ವಹಿಸಲು ಅರ್ಜಿದಾರರಿಗೆ ಯಾವುದೇ ಆದಾಯವಿಲ್ಲದಿದ್ದಾಗ ಜೀವನಾಂಶವನ್ನು ನೀಡಲಾಗುತ್ತದೆ. ದಂಡ ಪ್ರಕ್ರಿಯಾ ಸಂಹಿತೆಯ 125ನೇ ಪ್ರಕರಣದ ಮೇರೆಗೆ ಉಪಬಂಧಿಸಲಾದ ಪರಿಹಾರವು ಒಟ್ಟಾರೆಯಾಗಿ ಬೇರೆ ಬೇರೆ ಉದ್ದೇಶಕ್ಕೆ ಸಂಬಂಧಪಟ್ಟದ್ದಾಗಿದೆ. ಅಧಿನಿಯಮದ 24ನೇ ಪ್ರಕರಣದ ಮೇರೆಗೆ ಜೀವನಾಂಶವನ್ನು ನೀಡುವುದು ಕೌಟುಂಬಿಕ ನ್ಯಾಯಾಲಯದ ಅಧಿಕಾರ ವ್ಯಾಪ್ತಿಯಿಂದ ಕಸಿದುಕೊಳ್ಳಲಾಗಿದೆ. ದಂಡ ಪ್ರಕ್ರಿಯಾ ಸಂಹಿತೆಯ 125ನೇ ಪ್ರಕರಣದ ಮೇರೆಗಿನ ವ್ಯವಹರಣೆಗಳ ವ್ಯಾಪ್ತಿಯು, ಪೂರ್ತಿಯಾಗಿ ಸಂಕ್ಷಿಪ್ತ ವ್ಯವಹರಣೆಯಾಗಿದೆ. ಆದುದರಿಂದ, ಇದನ್ನು ಸಂಪೂರ್ಣವಾಗಿ ಭಿನ್ನ ವಲಯದಲ್ಲಿ ನಿರ್ವಹಿಸಲಾಗುತ್ತದೆ. ಅಧಿನಿಯಮದ 24ನೇ ಪ್ರಕರಣದ ಮೇರೆಗೆ ಜೀವನಾಂಶವನ್ನು ಮಂಜೂರು ಮಾಡುವ ಉದ್ದೇಶಕ್ಕಾಗಿ ನಿಯಮಿಸಲಾದ ಗರಿಷ್ಠ ಪರಿಮಿತಿಯಿದೆ. ಅನುಕೂಲವಿಲ್ಲದಿರುವ ಸ್ಥಿತಿಯಲ್ಲಿರುವ ಪಕ್ಷಕಾರನು ನಿರ್ವಹಿಸಲು ಮತ್ತು ವ್ಯವಹರಣೆಗಳನ್ನು ನಡೆಸಲು ಪಕ್ಷಕಾರನಿಗೆ ಜೀವನಾಂಶವನ್ನು ಸಂದಾಯ ಮಾಡುವುದಕ್ಕೆ ಸಂಬಂಧಿಸಿದ ಉಪಬಂಧವನ್ನು ಇದು ಕಲ್ಪಿಸಿರುವುದರಿಂದ ವ್ಯವಹರಣೆಗಳು ಇತ್ಯರ್ಥದಲ್ಲಿರುವ ಅವಧಿಯಲ್ಲಿ ವ್ಯಾಜ್ಯಕ್ಕೆ ಇಬ್ಬರು ಪಕ್ಷಕಾರರ ನಡುವಿನ ಸಮತೋಲನವನ್ನು ನಿರ್ವಹಿಸುವುದನ್ನು ಇದು ಕೋರುತ್ತದೆ. ದಂಡ ಪ್ರಕ್ರಿಯಾ ಸಂಹಿತೆಯ 125ನೇ ಪ್ರಕರಣದ ಮೇರೆಗೆ ಜೀವನಾಂಶವನ್ನು ಸಂದಾಯ ಮಾಡಲು, ಹಿಂದೆ ಅಸ್ತಿತ್ವದಲ್ಲಿದ್ದ ಆದೇಶಗಳಿದ್ದರೆ, ಸದರಿ ಆದೇಶವು, ಅಧಿನಿಯಮದ 24ನೇ ಪ್ರಕರಣದ ಮೇರೆಗಿನ ವ್ಯವಹರಣೆಯಲ್ಲಿ ವೈವಾಹಿಕ ನ್ಯಾಯಾಲಯದ ಗಮನವನ್ನು ಸೆಳೆಯುವಂಥದಾಗಿರುತ್ತದೆ. ಆದಾಗ್ಯೂ, ಅಂಥ ಆದೇಶದ ಅಸ್ತಿತ್ವವು ಸದರಿ ಅಧಿನಿಯಮದ 24ನೇ ಪ್ರಕರಣದ ಮೇರೆಗಿನ ಜೀವನಾಂಶವನ್ನು ಮಂಜೂರು ಮಾಡುವಲ್ಲಿ ನ್ಯಾಯಾಲಯದ ಮಾರ್ಗದಲ್ಲಿ ಅನ್ವಯವಾಗುವುದಿಲ್ಲ. ಆದುದರಿಂದ, ಅಧಿನಿಯಮದ 24ನೇ ಪ್ರಕರಣದ ಮೇರೆಗೆ ಅನ್ವಯಿಸುವಲ್ಲಿ ಕೌಟುಂಬಿಕ ನ್ಯಾಯಾಲಯವು ಮಧ್ಯಂತರ ಜೀವನಾಂಶವನ್ನು ತುಂಬಿಕೊಡುವ ಉದ್ದೇಶಕ್ಕಾಗಿ

ದಂಡ ಪ್ರಕ್ರಿಯಾ ಸಂಹಿತೆಯ 125ನೇ ಪ್ರಕರಣದ ಮೇರೆಗೆ ದಂಡಾಧಿಕಾರಿಯವರು ಹೊರಡಿಸಿದ ಆದೇಶವನ್ನು ಪರಿಗಣಿಸಲು ಹಕ್ಕುಳ್ಳದ್ದಾಗಿರುವುದು. ಅಧಿನಿಯಮದ 24ನೇ ಪ್ರಕರಣದ ಮೇರೆಗಿನ ಜೀವನಾಂಶವು ಸ್ವರೂಪದಲ್ಲಿ ಮಧ್ಯಂತರದ್ದಾಗಿದ್ದು, ಇದನ್ನು ವೈವಾಹಿಕ ವ್ಯವಹರಣೆಗಳು ವಿಲೇವಾರಿಯಾಗುವವರೆಗೆ ಕಾರ್ಯಾಚರಣೆಯಲ್ಲಿರುತ್ತವೆ. ಆದುದರಿಂದ, ದಂಡ ಪ್ರಕ್ರಿಯಾ ಸಂಹಿತೆಯ 125ನೇ ಪ್ರಕರಣದ ಮೇರೆಗೆ ಪ್ರಾರಂಭಿಸಲಾದ ಜೀವನಾಂಶ ವ್ಯವಹರಣೆಗಳನ್ನು, ಹಿಂದೂ ವಿವಾಹ ಅಧಿನಿಯಮದ 24ನೇ ಪ್ರಕರಣದ ಮೇರೆಗೆ ಹಿಂದೆ ಅಸ್ತಿತ್ವದಲ್ಲಿದ್ದ ಆಧಾರದ ಮೇಲೆ ವಜಾಗೊಳಿಸಲು ಸಾಧ್ಯವಾಗುವುದಿಲ್ಲ.

9. ಒಪ್ಪಿಕೊಂಡಿರುವಂತೆ, ಪ್ರಸ್ತುತ ಪ್ರಕರಣದಲ್ಲಿ ಪತಿಯು, ತನ್ನ ಪತ್ನಿಯು ಅವಳನ್ನು ನಿರ್ವಹಿಸಿಕೊಳ್ಳಲು ಪ್ರತ್ಯೇಕ ಯಾವುದೇ ಆದಾಯವನ್ನು ಗಳಿಸುವುದಿಲ್ಲವೆಂಬುದನ್ನು ತೋರಿಸಲು ಯಾವುದೇ ಮುಖ್ಯ ದಸ್ತಾವೇಜನ್ನು ಹಾಜರುಪಡಿಸಿರುವುದಿಲ್ಲ. ನ್ಯಾಯಾಲಯದ ಮುಂದೆ ಹಾಜರುಪಡಿಸಲಾದ ಯಾವುದೇ ಸಾಕ್ಷ್ಯವಿಲ್ಲದಿದ್ದಲ್ಲಿ, ವೈವಾಹಿಕ ಪ್ರಕರಣದ ವ್ಯವಹರಣೆಗಳನ್ನು ಇತ್ಯರ್ಥಪಡಿಸುವ ಅವಧಿಯಲ್ಲಿ ಪತ್ನಿಯನ್ನು ನಿರ್ವಹಿಸುವುದು ಪತಿಯ ಹೊಣೆಗಾರಿಕೆಯಾಗಿರುತ್ತದೆ. ದಂಡ ಪ್ರಕ್ರಿಯಾ ಸಂಹಿತೆಯ 125ನೇ ಪ್ರಕರಣದ ಮೇರೆಗೆ ಕ್ರಿಮಿನಲ್ ಪ್ರಕರಣದಲ್ಲಿ ಮಧ್ಯಂತರ ಜೀವನಾಂಶವನ್ನು ನೀಡಿದ್ದರೂ ಸಹ ಅರ್ಜಿದಾರ–ಪತಿಯು, ಎದುರುದಾರಳಿಗೆ ಒಂದೇ ಒಂದು ಕವಡೆ ಕಾಸನ್ನು ನೀಡಿರುವುದಿಲ್ಲ ಎಂಬ ಸಂಗತಿಯಲ್ಲಿ ಯಾವುದೇ ವಿವಾದವಿಲ್ಲ. ಕೌಟುಂಬಿಕ ನ್ಯಾಯಾಲಯವು, ಕ್ರಿಮಿನಲ್ ಪ್ರಕರಣದಲ್ಲಿ ಮಂಜೂರು ಮಾಡಿದ ಪ್ರತಿ ತಿಂಗಳಿಗೆ 2,000/– ರೂ.ಗಳ ಮಧ್ಯಂತರ ಜೀವನಾಂಶವನ್ನು ಪರಿಗಣಿಸಿ, ಪ್ರಶ್ನಿತ ಆದೇಶವನ್ನು ಹೊರಡಿಸಲು ಮುಂದಾಗಿದೆ ಮತ್ತು ಇದು ಕಾನೂನಿಗನುಸಾರವಾಗಿರುತ್ತದೆ.

10. ಮಾನ್ಯ ಸರ್ವೋಚ್ಚ ನ್ಯಾಯಾಲಯವು ವರದಿಯಾದ ***ಭುವನ್ ಮೋಹನ್ ಸಿಂಗ್ –ವಿರುದ್ಧ– ಮೀನಾ ಮತ್ತು ಇತರರು***[1], ಪ್ರಕರಣದಲ್ಲಿ, ದಂಡ ಪ್ರಕ್ರಿಯಾ

1. ಎಐಆರ್ 2014 ಎಸ್‌ಸಿ 2875

ಸಂಹಿತೆಯ 125ನೇ ಪ್ರಕರಣದ ಉಪಬಂಧಗಳನ್ನು ಪರಿಗಣಿಸುವಾಗ ಈ ಮುಂದಿನಂತೆ ಅಭಿಪ್ರಾಯಪಟ್ಟಿದೆ:

> *"2. ಉಪಬಂಧದಲ್ಲಿ ಉಪಬಂಧಿಸಲಾದ ಕಾರಣಗಳಿಗಾಗಿ ವೈವಾಹಿಕ ಗೃಹವನ್ನು ತೊರೆದಿರುವ ಮಹಿಳೆಯ ಸಂಕಟ, ಆರ್ಥಿಕ ಸಂಕಷ್ಟ ಯಾತನೆಯನ್ನು ಸರಿಪಡಿಸಲು ದಂಡ ಪ್ರಕ್ರಿಯಾ ಸಂಹಿತೆಯ (ಸಂಕ್ಷಿಪ್ತತೆಗಾಗಿ ಸಂಹಿತೆ) 125ನೇ ಪ್ರಕರಣವು ಊಹಿಸಿದ್ದುದನ್ನು ಪುನರುಚ್ಚರಿಸುತ್ತದೆ, ಹಾಗೆಯೇ ಕೆಲವು ಸೂಕ್ತ ಸಿದ್ಧತೆಗಳನ್ನು ನ್ಯಾಯಾಲಯವು ಮಾಡಬಹುದಾಗಿದೆ ಮತ್ತು ಅವಳನ್ನೇ ಸಮರ್ಥಳಾಗಿ ಮಾಡಬಹುದು ಮತ್ತು ಅವರು ಜೊತೆಗಿದ್ದರೆ ಅವಳ ಮಕ್ಕಳನ್ನು ಬೆಂಬಲಿಸಬಹುದು. ಜೀವನಾಧಾರದ ಪರಿಭಾವನೆಯು ಅಗತ್ಯವಾಗಿ ಪ್ರಾಣಿಯ ಜೀವನ ಸಾಗಿಸಲು ಎಂಬ ಅರ್ಥವನ್ನು ನೀಡುವುದಿಲ್ಲ. ಎಲ್ಲಿಯಾದರೂ ಅವಳ ಮೂಲ ಜೀವನಾಂಶದ ಸಂಬಂಧ ವಿಲಾಸದ ಮತ್ತು ಸುತ್ತಾಟದಿಂದ ದೂರವಿರುವ ಅಜ್ಞಾತನಂಥ ಭಾವನೆ. ಅವಳು ಅವಳ ಪತಿಯ ಮನೆಯಲ್ಲಿ ಅವಳು ಜೀವಿಸುವಂತೆ ಅದೇ ರೀತಿಯಲ್ಲಿ ಜೀವನವನ್ನು ನಡೆಸಲು ಕಾನೂನಿನಲ್ಲಿ ಹಕ್ಕುಳ್ಳವಳಾಗಿರುವಳು. ಗಣ್ಯ ವ್ಯಕ್ತಿಯೊಬ್ಬರಾದ ಪತ್ನಿಯ ಸಂದರ್ಭದಲ್ಲಿ ಸ್ಥಾನಮಾನ ಮತ್ತು ಅಂತಸ್ತು ಸಲೀಸಾಗಿರುತ್ತವೆ. ಪತಿಯ ಹೊಣೆಗಾರಿಕೆಗಳು ಯುಕ್ತವಾಗಿರುತ್ತವೆ. ಈ ಸ್ವರೂಪದ ವ್ಯವಹರಣೆಯಲ್ಲಿ, ಗೌರವಯುತವಾಗಿ ಬದುಕುವ ಪ್ರಯೋಜನವನ್ನು ಅವಳಿಗೆ ಇಲ್ಲದಂತೆ ಮಾಡುವಲ್ಲಿ ಪತಿಯು ನುಣುಚಿಕೊಳ್ಳಲು ಸಾಧ್ಯವಿಲ್ಲ. ಮದುವೆಯ ಸಮಯದಲ್ಲಿ ಗಂಭೀರವಾಗಿ ನೆರವೇರಿಸುವುದರ ಸಂಬಂಧದಲ್ಲಿ ಮತ್ತು ರಕ್ಷಣೆಯನ್ನು ರೂಪಿಸುವ ಶಾಸನಬದ್ಧ ಕಾನೂನಿಗೆ ಸದೃಶವಾಗಿದ್ದು, ಹೆಂಡತಿಯು ನಿರ್ಗತಿಕಳಾಗದಂತೆ ಭಿಕ್ಷುಕಿಯಾಗದಂತೆ ನೋಡಿಕೊಳ್ಳುವುದು ಗಂಡನ ಜವಾಬ್ದಾರಿಯಾಗಿರುತ್ತದೆ. ಜೀವನವು ಮಣ್ಣು ಪಾಲಾಯಿತೆಂಬ*

> *ಚಿಂತೆಯಲ್ಲಿ ಆಕೆ ತನ್ನ ವಿಧಿಯನ್ನು ಹಳಿದುಕೊಳ್ಳುವಂತಹ ಸನ್ನಿವೇಶವು ಅವಿವೇಕದಿಂದ ಸೃಷ್ಟಿಯಾಗಬಾರದು, ಇದು ಸಂಪೂರ್ಣವಾಗಿ ಅನುಮತೀಯವಾದುದಲ್ಲ. ವಾಸ್ತವವಾಗಿ, ಪತಿಯು, ದೈಹಿಕ ಕೂಲಿಯಿಂದ ಹಣವನ್ನು ಗಳಿಸಲು ಅಗತ್ಯಪಡಿಸಿದರೂ ಅವನು ಸಶಕ್ತ ದೇಹದಾರ್ಢ್ಯನಾಗಿದ್ದರೂ ಸರಿ ಆರ್ಥಿಕ ಬೆಂಬಲವನ್ನು ನೀಡುವುದು ಪರಮ ಪವಿತ್ರ ಕರ್ತವ್ಯವಾಗಿರುವುದು. ಯಾವುದೇ ಕಾನೂನುಬದ್ಧ ಅನುಮತೀಯ ಆಧಾರಗಳ ಮೇಲೆ ಪತಿಯಿಂದ ಜೀವನಾಂಶವನ್ನು ಪಡೆದುಕೊಳ್ಳಲು ಪತ್ನಿಯು ಹಕ್ಕುಳ್ಳವಳಾಗಿರುವುದಿಲ್ಲವೆಂಬ ನ್ಯಾಯಾಲಯದ ಆದೇಶದ ಹೊರತು ತಪ್ಪಿಸಿಕೊಳ್ಳುವ ಮಾರ್ಗವಿಲ್ಲ.”*

11. ಪ್ರಸ್ತುತ ಪ್ರಕರಣದ ಒಪ್ಪಿತ ಸಂಗತಿಗಳನ್ನು ಮತ್ತು ಮಾನ್ಯ ಸರ್ವೋಚ್ಚ ನ್ಯಾಯಾಲಯವು ಘೋಷಿಸಿದ ಕಾನೂನನ್ನು ದೃಷ್ಟಿಯಲ್ಲಿಟ್ಟುಕೊಂಡು, ಈ ನ್ಯಾಯಾಲಯವು, ಕೌಟುಂಬಿಕ ನ್ಯಾಯಾಲಯ ಮಂಜೂರು ಮಾಡಿದ ಮಧ್ಯಂತರ ಜೀವನಾಂಶವು ನ್ಯಾಯಯುತ ಮತ್ತು ಯುಕ್ತವಾದುದಾಗಿದೆಯೆಂಬ ಅಭಿಪ್ರಾಯವನ್ನು ಪರಿಗಣಿಸಿದೆ. ಅರ್ಜಿದಾರನು, ಭಾರತ ಸಂವಿಧಾನದ 227ನೇ ಅನುಚ್ಛೇಧದ ಮೇರೆಗೆ ಹಸ್ತಕ್ಷೇಪ ಮಾಡಲು ಯಾವುದೇ ಆಧಾರವನ್ನು ರೂಪಿಸಿರುವುದಿಲ್ಲ.

ತದನುಸಾರವಾಗಿ ರಿಟ್ ಅರ್ಜಿಯನ್ನು ವಜಾಗೊಳಿಸಲಾಗಿದೆ.